ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 1

**ದಿಃ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದ :-**

ದಾವಾ ಸ್ವತ್ತು ನಿಡಿ 75 ರ ಮರಣ ಶಾಸನ ಪತ್ರದಲ್ಲಿ ಕೈ ತಪ್ಪಿನಿಂದ ಬಿಟ್ಟು ಹೋಗಿದೆ ಎಂದು ಕಾನೂನು ಕ್ರಮ ತೆಗೆದುಕೊಂಡಿದ್ದೀರ ಎಂದರೆ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರಿದು ವಿಲ್ ಪತ್ರ, ಕ್ರಯ ಪತ್ರ ಮತ್ತು ಋಣಭಾರ ರಾಹಿತ್ಯ ಪತ್ರಗಳನ್ನು ತಹಶೀಲ್ದಾರ್ ಕಛೇರಿಗೆ ಸಲ್ಲಿಸಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದು ಸ್ವತಃ ಸಾಕ್ಷಿ ನುಡಿಯುತ್ತಾರೆ. ದಾವಾ ಸ್ವತ್ತಿಗೆ ಖಾತೆಯು ತಮಗೆ ವಿಲ್ ಪತ್ರ, ಕ್ರಯ ಪತ್ರಗಳ ಮೇಲೆ ಆಗಿಲ್ಲ ಆರ್ ಆರ್ ಟಿ ಪ್ರಕರಣದ ಮೇಲೆ ಅನ್ವಯ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಡಿ 17 ರ ದಾಖಲಾತಿಯನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ 17 ರ ಮ್ಯುಟೇಷನ್ ಲ್ಲಿ ದಾವಾ ಸ್ವತ್ತಿನ ಖಾತೆಯು ಕ್ರಯ ಪತ್ರ ಅಥವಾ ಮರಣ ಶಾಸನ ಪತ್ರದ ಮೂಲಕ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ 11 ರ ವಂಶವೃಕ್ಷ ಪ್ರಮಾಣ ಪತ್ರವನ್ನು ನನ್ನ ತಾಯಿ ಹಾಗೂ ಪ್ರತಿವಾದಿ 1 ರ ಹೇಳಿಕೆ ಮೇರೆಗೆ ಬರೆಯಲಾಗಿದೆ. ತಮ್ಮ ತಂದೆ ಮುತ್ತಯ್ಯ ನವರ ಸಾಕು ಮಗ ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ಹಾಜರುಡಿಸಿದ್ದೀರ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯಲ್ಲಿ ಇದರ ಬಗ್ಗೆ ಉಲ್ಲೇಖ ಇದೆ ಆದರೆ ಸದರಿ ವಿಚಾರದ ಬಗ್ಗೆ ಯಾವುದೇ ಸರ್ಕಾರಿ ದಾಖಲಾತಿಗಳಲ್ಲಿ ನಮೂದಾಗಿರುವುದಿಲ್ಲ.

ದಾವಾ ಸ್ವತ್ತು ಮೂಲತಃ ಚನ್ನಯ್ಯರವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ಚನ್ನಯ್ಯನವರಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ. ಅವರುಗಳ ಹೆಸರು 1) ಚಲುವಯ್ಯ 2) ನರಸಿಂಹಯ್ಯ 3) ಮೋಟಯ್ಯ ಮತ್ತು 4) ಐಯ್ಯಣ್ಣಪ್ಪ. ಚನ್ನಯ್ಯನವರು ಮರಣ ಹೊಂದಿದ ನಂತರ ಚನ್ನಯ್ಯನ ನಾಲ್ಕು ಜನ ಮಕ್ಕಳು ತಮ್ಮ ಕುಟುಂಬದ ಆಸ್ತಿಗಳನ್ನು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ 1970 ನೇ ಸಾಲಿಗಿಂತ ಮುಂಚೆ ವಿಭಾಗ ಮಾಡಿಕೊಂಡಿರುತ್ತಾರೆ. ಮೌಖಿಕವಾಗಿ ವಿಭಾಗ ಆಗಿದೆ ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ನಾನು ಕೊಟ್ಟಿರುತ್ತೇನೆ.

ಓ ಎಸ್ ನಂಃ 116/2016

ಡಿ ಡಬ್ಲ್ಯೂ ಃ 1

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.